ಆ) ಹಾಗಿದ್ದಲ್ಲಿ ಅವನ್ನು ಯಾವಾಗ ಒದಗಿಸಲಾಗುವುದು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿ).—

ಅ) ಬಂದಿದೆ.

ಆ) ಈಗಾಗಲೇ ವಿಜ್ಞಾನ ವಿಭಾಗಕ್ಕೆ ೧೯೮೬-೮೭ರ ಸಾಲಿನಲ್ಲಿ ಕಲಾ ೩೦೦೦ ರೂ.ಗಳಂತೆ ಬಿಡುಗಡೆ ಮಾಡಲಾಗಿದೆ. ಹೆಚ್ಚಿನ ಹಣಕ್ಕೆ ಬೇಡಿಕೆ ಬಂದರೆ ಅದನ್ನು ಪರಿಶೀಲಿಸಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಕಡೂರು ತಾಲ್ಲೂಕಿನ ರಸ್ತೆಗಳ ರಿಪೇರಿಯ ಬಗ್ಗೆ

೫೪೭. **ಶ್ರೀ ಪಿ. ಬಿ. ಓಂಕಾರಮೂರ್ತಿ** (ಕಡೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಎರಡೂ ಜಿಲ್ಲೆಗಳೂ ಹಾಗೂ ಎರಡು ತಾಲ್ಲೂಕುಗಳೂ ಸೇರುವ ಕಡೂರು ತಾಲ್ಲೂಕಿನಲ್ಲಿರುವ ಕೆಲವು ಪ್ರಾಮುಖ್ಯ ರಸ್ತೆಗಳನ್ನು ಜಿಲ್ಲಾ ಪರಿಷತ್ತಿಗೆ ವಹಿಸಿಕೊಡದೆ ಲೋಕೋಪಯೋಗಿ ಇಲಾಖೆಯಲ್ಲಿಯೇ ಮುಂದುವರೆಸುವುದು ಸೂಕ್ತವೆಂದು ಸರ್ಕಾರದವರು ತಿಳಿದಿರುವರೇ ?

ಆ) ಹಾಗಿದ್ದಲ್ಲಿ ಬಹಳ ಪ್ರಾಮುಖ್ಯವಾದ ಹೇರಳವಾಗಿ ಬಸ್ಸುಗಳು ಸಂಚರಿಸುವ ರಸ್ತೆಗಳಾದ ಹುಳಿಯಾರು ಕಾರವಾರ ಪಂಚನಹಳ್ಳಿ ಸಿಂಗೊಗೆರೆ, ಬೆಂಗಳೂರು ಹೊನ್ನಾವರದಿಂದ ರಾಮನ ಕೆರೆ, ಹಿರೇನಲ್ಲೂರು, ಸೊಲ್ಲಾಪುರ ಮಾರ್ಗವಾಗಿ ತರೀಕೆರೆ ಮತ್ತು ಅಜ್ಜಂಪುರ ಹಾಗೂ ಹೊಸದುರ್ಗ ರಸ್ತೆಯನ್ನೂ ಸಹ ಜಿಲ್ಲಾ ಪರಿಷತ್ತಿಗೆ ವಹಿಸದೆ ಲೋಕೋಪಯೋಗಿ ಇಲಾಖೆಯಲ್ಲಿ ಉಳಿಸಿಕೊಳ್ಳುವ ಯೋಜನೆ ಸರ್ಕಾರದವರಿಗಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ).—

ಅ) ಮತ್ತು ಆ) ಎಲ್ಲಾ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳು ಹಾಗೂ ಗುರ್ತಿಸಿರುವ ಪ್ರೇಕ್ಷಣೀಯ ಮತ್ತು ಮುಖ್ಯ ಕ್ಷೇತ್ರಗಳನ್ನು ಸಂಪರ್ಕಿಸುವ ರಸ್ತೆಗಳನ್ನು ಮತ್ತು ಮುಖ್ಯವಾದ ಆಂತರ ಜಿಲ್ಲಾ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಉಳಿಸಿಕೊಳ್ಳಲು ತೀರ್ಮಾನಿಸಲಾಗಿದೆ. ಪ್ರಶ್ನೆಯಲ್ಲಿ ಕೋರಿರುವ ಸದರಿ ರಸ್ತೆಗಳು ಈ ವ್ಯಾಪ್ತಿಯಲ್ಲಿ ಒಂದಲ್ಲಿ ಅವುಗಳನ್ನು ಲೋಕೋಪಯೋಗಿ ಇಲಾಖೆಯ ವಶಕ್ಕೆ ತೆಗೆದುಕೊಳ್ಳುವುದನ್ನು ಪರಿಶೀಲಿಸಲಾಗುವುದು.

ಕಡೂರು ತಾಲ್ಲೂಕಿನ ಕಂಕ್ಕ ಸಮುದ್ರ ಹಾಗೂ ವಿಷ್ಣು ಸಮುದ್ರಗಳಿಗೆ ಕೆರೆಯ ಕಾಮಗಾರಿ ಬಗ್ಗೆ

೫೪೯. **ಶ್ರೀ ಪಿ. ಬಿ. ಓಂಕಾರಮೂರ್ತಿ** (ಕಡೂರು).—ಮಾನ್ಯ ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಡೂರು ತಾಲ್ಲೂಕಿನಲ್ಲಿರುವ ಕಂಕ್ಕಸಮುದ್ರ ಹಾಗೂ ಕಾಮಗಾರಿ ಬಗ್ಗೆ ಸರ್ಕಾರಕ್ಕೆ ಕಳೆದ ಎರಡು ವರ್ಷಗಳಿಂದ ಮನವಿ ಮಾಡಿಕೊಂಡು ಬಂದಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಅದರ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.